ಅರೆ ಕಾಲಿಕ ಉಪನ್ಯಾಸಕರುಗಳಿಗೆ ಮಾಸಿಕ ರೂ. 1200-00ಕ್ಕೆ ಮೀರದಂತೆ ಅರೆ ಕಾಲಿಕ ಭತ್ಯೆಯನ್ನು ನೀಡಲಾಗುತ್ತಿದೆ.

ಆ) ಸುಮಾರು 06 ತಿಂಗಳ ಅವಧಿಯಿಂದ 08 ವರ್ಷದ ಅವಧಿಯವರಿಗೆ ಕೆಲವು ಅರೆಕಾಲಿಕ ಉಪನ್ಯಾಸಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. (ಕಾಲೇಜುವಾರು ವಿವರಗಳನ್ನು ಸಂಗ್ರಹಿಸಲಾಗುತ್ತಿದೆ. ನಂತರ ಈ ವಿವರಗಳನ್ನು ಮಾನ್ಯ ಸದಸ್ಯರಿಗೆ ಒದಗಿಸಲಾಗುವುದು)

ಇ) ಪೂರ್ಣ ಕಾಲಿಕ ಬೋಧಕರನ್ನು ನೇಮಿಸುವವರೆಗೆ ಇವರ ಸೇವೆಯನ್ನು ಮುಂದುವರೆಸಲಾಗುತ್ತದೆ.

ಈ) ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ 861 ಮತ್ತು ಖಾಸಗಿ ಅನುದಾನಿತ ಕಾಲೇಜುಗಳಲ್ಲಿ 530.

ಉ) ಅವರುಗಳು ಅಗತ್ಯ ವಿದ್ಯಾರ್ಹತೆಯನ್ನು ಹೊಂದಿರುವುದಿಲ್ಲವಾದ್ದರಿಂದ ಇದು ಉದ್ಭವಿಸುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ವಿಷಯ:- ಹೊಸನಗರ ತಾಲ್ಲೂಕು ಕೇಂದ್ರದಲ್ಲಿರುವ ಆಸ್ಪತ್ರೆಯ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1651 (2189)

ಶ್ರೀ ಆಯನೂರು ಮಂಜುನಾಥ್ (ಹೊಸನಗರ):- ಮಾನ್ಯ ಆರೋಗ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕು ಕೇಂದ್ರದಲ್ಲಿರುವ ಆಸ್ಪತ್ರೆಯಲ್ಲಿ ಇರಬೇಕಾದ ಸಿಬ್ಬಂದಿ ಎಷ್ಟು? ಈಗ ಎಷ್ಟಿದೆ?

ಆ) ಸದರಿ ಆಸ್ಪತ್ರೆಯಲ್ಲಿ ಇರಬೇಕಾದ ವೈದ್ಯರು ಎಷ್ಟು ? ಹಾಲಿ ಎಷ್ಟಿದೆ?

ಇ) ಸದರಿ ಆಸ್ಪತ್ರೆಯಲ್ಲಿ ಖಾಯಂ ವೈದ್ಯರಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದಯೇ? ಡೆಪ್ಯುಟೇಶನ್‌ನಲ್ಲಿರುವ ವೈದ್ಯರನ್ನು ಅಲ್ಲಿಯೇ ಖಾಯಂಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೆ?

ಈ) ಕೊರತೆ ಇರುವ ವೈದ್ಯರನ್ನು ಮತ್ತು ಸಿಬ್ಬಂದಿಯನ್ನು ಭರ್ತಿ ಮಾಡಲು ಸರ್ಕಾರ ಕ್ರಮಕೈಗೊಳ್ಳುವುದೇ? ಯಾವಾಗ ಭರ್ತಿ ಮಾಡಲಾಗುವುದು.

ಶ್ರೀ ಹೆಚ್.ಸಿ.ಮಹದೇವಪ್ಪ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ)

ಒಟ್ಟು	ಭರ್ತಿ	ಖಾಲಿ
68	32	36.

ಆ) ವೈದ್ಯರು - 4
ದಂತ ವೈದ್ಯರು - 1
ಒಟ್ಟು 5 ಹುದ್ದೆಗಳು ಎಲ್ಲ ಖಾಲಿ ಇವೆ.

ಇ) ಬಂದಿದೆ. ಎಲ್.ಸಿ.ಡಿ.ಆರ್. ವೈದ್ಯರು ಒಬ್ಬರು ಈಗ ಕಾರ್ಯ ನಿರ್ವಹಿಸುತ್ತಿದ್ದಾರೆ.

ಖಾಯಂ ಆಗಿ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಈ)ಖಾಲಿ ಇರುವ ವೈದ್ಯರು ಹಾಗೂ ಇತರೆ ಸಿಬ್ಬಂದಿಗಳನ್ನು ಆದ್ಯತೆ ಮೇರೆಗೆ ಭರ್ತಿ ಮಾಡಲಾಗುವುದು.

ವಿಷಯ :- ಶಿವಮೊಗ್ಗ ಮೆಗ್ಗಾನ್ ಆಸ್ಪತ್ರೆಗೆ ಸಂದರ್ಶಕ ಸಮಿತಿ ರಚನೆ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 1652 (2190)

ಶ್ರೀ ಆಯನೂರು ಮಂಜುನಾಥ್ (ಹೊಸನಗರ):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಯಲ್ಲಿ ಸಾರ್ವಜನಿಕ ಸಂದರ್ಶಕ ಸಮಿತಿ ಹೊಸದಾಗಿ ರಚನೆ ಆಗಿದೆಯೇ?

ಆ)ಸಂದರ್ಶಕ ಸಮಿತಿ ಅವಶ್ಯಕವೆಂದು ಸರ್ಕಾರ ಭಾವಿಸುತ್ತದೆಯೇ?

ಇ)ಹಾಗಿದ್ದಲ್ಲಿ, ಸಮಿತಿಯನ್ನು ಯಾವಾಗ ರಚಿಸಲಾಗುವುದು?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ) ಇಲ್ಲ.

ಆ) ಹೌದು.

ಇ) ಜಿಲ್ಲಾ ಸರ್ಜನ್, ಮೆಗ್ಗಾನ್ ಆಸ್ಪತ್ರೆ, ಶಿವಮೊಗ್ಗ , ಇವರಿಗೆ ಅವರ ಕ್ಷೇತ್ರದ ಶಾಸಕರನ್ನು ಸಂಪರ್ಕಿಸಿ 18 ಸದಸ್ಯರ ಸಮಿತಿಯನ್ನು ರಚಿಸಲು ಪ್ರಸ್ತಾವನೆ ಸಲ್ಲಿಸಲು ಕೋರಲಾಗಿದ್ದು, ಪ್ರಸ್ತಾವನೆ ಬಂದ ತಕ್ಷಣ ಪರಿಶೀಲಿಸಿ, ಸಮಿತಿ ರಚಿಸಲಾಗುವುದು.

ವಿಷಯ:- ಸುಳ್ಯ ಕ್ಷೇತ್ರದಲ್ಲಿ ರಬ್ಬರ್ ಪ್ಲಾಂಟೇಷನ್ ಕಾರ್ಮಿಕರ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1653 (2018)

ಶ್ರೀ ಎಸ್.ಅಂಗಾರ (ಸುಳ್ಯ):- ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ 94-95ನೇ ಸಾಲಿನಲ್ಲಿ ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮದಿಂದ ರಬ್ಬರ್ ಪ್ಲಾಂಟೇಷನ್ ಮಾಡಲಾಗಿರುವ ಸ್ಥಳಗಳಾವುವು?

ಆ) ರೀಪ್ಲಾಂಟೇಷನ್ ಮಾಡುವಾಗ ಹಳೆ ರಬ್ಬರ್ ಮರದ ಮಾರಾಟದಿಂದ ಸರಕಾರಕ್ಕೆ ಬಂದ ಒಟ್ಟು ಆದಾಯ ಎಷ್ಟು, ರೀಪ್ಲಾಂಟೇಷನ್‌ಗೆ ತಗಲಿದ ಒಟ್ಟು ಖರ್ಚು ಎಷ್ಟು?

ಇ)ರೀಪ್ಲಾಂಟೇಷನ್ ಮಾಡುವಾಗ ಈ ಹಿಂದೆ ಪ್ಲಾಂಟೇಷನ್‌ನಲ್ಲಿ ಕೆಲಸ ನಿರ್ವಹಿಸುತ್ತಿದ್ದ ಕಾರ್ಮಿಕರಿಗೆ ಯಾವ ರೀತಿಯ ಬದಲಿ ಕೆಲಸದ ವ್ಯವಸ್ಥೆ ಮಾಡಲಾಗಿದೆ? ಮಾಡಿದ್ದಲ್ಲಿ ಎಲ್ಲಿ, ಎಷ್ಟು ಕಾರ್ಮಿಕರು ಎಷ್ಟು ವಿವರ ಕೊಡುವುದು?

ಶ್ರೀ ಹೆಚ್.ವೈ.ಮೇಟಿ (ಅರಣ್ಯ ಸಚಿವರು):-

ಅ) 1994-95ನೇ ಸಾಲಿನಲ್ಲಿ ರೀಪ್ಲಾಂಟಿಂಗ್ ಕೆಲಸಗಳನ್ನು ಮಾಡಿರುವುದಿಲ್ಲ.

ಆ) 1994-95ನೇ ಸಾಲಿನಲ್ಲಿ ರಬ್ಬರ್ ಮರುನಾಟಿಕೆ ಯೋಜನೆ ಪ್ರದೇಶದ ಹಳೆ ರಬ್ಬರ್